MADAM SPEAKER – Question No. 609 and 687 may be taken up together.

**Sahyadri Sahakari Sakkare Karkhane, Shimoga*

609. SRI S. M. SHEERANALY CHANDRASEKHAR (Hosanagar)—

Will the Minister for Industries and Parliamentary Affairs be pleased to state —

(*a*) the reasons for the inordinate delay in issuing Licence to start Sugar factory under the Co-operative Sector in Shimoga,

(*b*) whether the F. C. I. has surrendered their licence to the Government to help the proposed "Sahyadri Sakkare Karkhane, Shimoga" to obtain licence,

(*c*) if so the action the Government propose to take in the matter.

(*d*) whether the Government is aware of the talk in Shimoga District, that some private individuals are trying to start a "Sugar Factory" under private limited and because of that there is delay in granting the Licence to "Sahyadri Sahakari Sakkare Karkhane, Shimoga",

(*e*) if so, the steps taken to counter the rumours and issue the licence to the sugar factory under the Co-operative Sector?

SRI S. M. KRISHNA (Minister for Industries and Parliamentary Affairs

(*a*) The application of Sahyadri Sahakari Sakkare Karkhane Ltd has been forwarded to Government of India with recommendation of the State Government.

(*b*) and (*c*)The State Government have requested the Government of India that the industrial licence granted to Karnataka State Industrial Investment and Development Corporation may be treated as surrendered and recommended that the Sahyadri Sahakari Sakkare Karkhane Ltd., Shimoga, may be granted an industrial licence instead

(*d*) No.

(*e*) Does not arise in view of the reply to the foregoing clauses.

**Sahyadri Sahakari Sakkare Karkhane. Shimoga*

687. SRI A R. BADARINARAYAN (Shimoga)—

Will the Minister for Industries and Parliamentary Affairs be pleased to state.—

(*a*) the progress so far achieved for starting of a Co-operative Sugar Factory (Sahyadri Sugar Factory) in Shimoga District

(*b*) the amount so far collected for the purpose?

SRI S. M. KRISHNA (Minister for Industries and Parliamentary Affairs —

(*a*) Sahyadri Sahakari Sakkare Karkhane Ltd., Shimoga has been registered under the Karnataka Co-operative Societies Act. The State Government have recommended to Government of India for the issue of an industrial licence to Sahyadri Sahakari Sakkare Karkhane Ltd., Shimoga for the manufacture of Sugar.

(*b*) Rs. 10 lakhs have been collected so far as share capital by the Society

ಶ್ರೀ ಎ. ಎಸ್. ಶೀರ್ನಳ್ಳಿ ಚಂದ್ರಶೇಖರ್: ನನ್ನ ಆ ಪ್ರಶ್ನೆಗೆ ಉತ್ತರ ಸರಿಯಾಗಿ ಕೊಟ್ಟಿಲ್ಲ. ಶಿವಮೊಗ್ಗದಲ್ಲಿ ಸಹಕಾರಿ ಕ್ಷೇತ್ರದಲ್ಲಿ ಸಕ್ಕರೆ ಕಾರ್ಖಾನೆಯನ್ನು ಪ್ರಾರಂಬಿಸಲು ಪರವಾನೆಯನ್ನು ನೀಡಲು ಅತಿ ವಿಳಂಬ ಉಂಟಾಗಿರುವುದಕ್ಕೆ ಕಾರಣಗಳೇನು ಎಂದು ಕೇಳಿದ್ದೇನೆ. Why this inordinate delay? This important question you have not answered.

† ಶ್ರೀ ಎಸ್. ಎಂ. ಕೃಷ್ಣ:—ಶಿವಮೊಗ್ಗದಲ್ಲಿ ಸಕ್ಕರೆ ಕಾರ್ಖಾನೆಯನ್ನು ಸ್ಥಾಪನೆ ಮಾಡುವುದ ಕೋಸ್ಕರ ಕರ್ನಾಟಕ ಸ್ಟೇಟ್ ಇಂಡಸ್ಟ್ರಿಯಲ್ ಇನ್‌ವೆಸ್ಟ್‌ಮೆಂಟ್ ಅಂಡ್ ಡೆವಲಿಪ್‌ಮೆಂಟ್ ಕಾರ್ಪೊರೇಷನ್‌ಗೆ ಒಂದು ಲೆಟರ್ ಆಫ್ ಇಂಟೆಂಟ್ ಬಂದಿತ್ತು. ಆದು ಪರವಾನೆ ಬಂದ ಕಾಲದಲ್ಲಿ ಶಿವಮೊಗ್ಗದಲ್ಲಿ ಸಹಕಾರ ಕ್ಷೇತ್ರದಲ್ಲಿ ಸಕ್ಕರೆ ಕಾರ್ಖಾನೆ ಆಗಬೇಕು, ಇನ್ಯಾವ ಕ್ಷೇತ್ರದಲ್ಲೂ ಆಗಬಾರದು ಎನ್ನುತಕ್ಕ ಭಾವನೆ ಬಂದಿದ್ದರಿಂದ ನಾವು ಈಗ ನಮಗೆ ಬಂದಂಥ ಲೈಸನ್ಸನ್ನು ಗವರ್ನಮೆಂಟ್ ಆಫ್ ಇಂಡಿಯಾಗೆ ಸರೆಂಡರ್ ಮಾಡಿ Simultaneously we have made a recommendation to the Government of India that this sugar cooperative institution may be given a licence and we are hoping that in the near future, we will be getting the license for starting the factory in the cooperative sector.

ಶ್ರೀ ಎಸ್. ಎಂ ಶೀರ್ನಳ್ಳಿ ಚಂದ್ರಶೇಖರ್ —ಈಗಾಗಲೇ ಷೇರು ಬಂಡವಾಳವನ್ನು ಕಲೆಕ್ಟ್ ಮಾಡಿ ೨ ವರ್ಷ ಆಯಿತು. ರೈತರು ತಮ್ಮ ಹತ್ತಿರ ದುಡ್ಡು ಇಲ್ಲದೇ ಹೋದರೂ ೧೫-೨೦ ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಇದರ ಬಗ್ಗೆ ಗಮನಕರಿಸಿ, ತಾವು ಕ್ರಮ ತೆಗೆದುಕೊಂಡು ಜಾಗ್ರತೆ ಮಾಡುತ್ತೀರಾ?

ಶ್ರೀ ಎಸ್. ಎಂ. ಕೃಷ್ಣ.— ನಾವು ಗಮನ ಹರಿಸದೇ ಇದ್ದಿದ್ದರೆ ಇಲ್ಲಿಯವರೆಗೆ ಬರುತ್ತಾ ಇರಲಿಲ್ಲ. ಕೊಆಪರೇಟಿವ್ ಸೆಕ್ಟಾರಿನಲ್ಲಿ ಸಕ್ಕರೆ ಕಾರ್ಖಾನೆಯನ್ನು ಸ್ಥಾಪನೆ ಮಾಡಲಿಕ್ಕೆ ಬಂದ ಲೈಸನ್ಸನ್ನು ಮತ್ತೆ ನಾವು ಸರೆಂಡರ್ ಮಾಡಿ We have made a recommendation to the Government of India to issue a license for this cooperative sector sugar factory. It will take some time. They have collected 10 lakhs of rupees as share capital. We have asked the Divisional Commissioner under whom the committee has been set up to raise the requisite funds. They are going about with all seriousness to raise the share capital.

ಶ್ರೀ ಎ. ಶಂಕರ ಆಳ್ವ.— ಮಿನಿಮಂ ಎಷ್ಟು ಕಲೆಟ್ಟ್ ಮಾಡಬೇಕು?

ಶ್ರೀ ಎಸ್. ಎಂ. ಕೃಷ್ಣ —ಇಲ್ಲಿ ಸುಮಾರು ೩೦ ಲಕ್ಷ ರೂಪಾಯಿ.

1-30 PM

ಶ್ರೀ ಕಾಗೋಡು ತಿಮ್ಮಪ್ಪ.—ಸ್ವಾಮಿ ಈ ಕ್ಷೇತ್ರದಲ್ಲಿ ಕೆಲವರು ಖಾಸಗಿ ಜನರು ಒಂದು ಸಕ್ಕರೆ ಕಾರ್ಖಾನೆಯನ್ನು ಸ್ಥಾಪನೆ ಮಾಡಬೇಕು ಎನ್ನತಕ್ಕಂಥ ಉದ್ದೇಶವನ್ನಿಟ್ಟುಕೊಂಡು ಇವತ್ತು ಅನೇಕ ಅಡೆತಡೆಗಳನ್ನು ತಂದೊಡ್ಡುತ್ತಿದ್ದಾರೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ? ಹಾಗಾದರೆ ಆ ಒಂದು ಒತ್ತಡಕ್ಕೆ ತಾವು ಯಾವ ರೀತಿ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತೀರಿ?

ಶ್ರೀ ಎಸ್. ಎಂ. ಕೃಷ್ಣ.—ಕೆಲವು ಖಾಸಗಿ ಜನಗಳು ಅಲ್ಲಿ ಫ್ಯಾಕ್ಟರಿ ಮಾಡಬೇಕು ಹಾಗೆಂದು ಹೇಳಿ ಪ್ರಯತ್ನವನ್ನು ನಡೆಸಿದ್ದು ನಿಜ ಆದರೆ ಆ ಪ್ರಯತ್ನವನ್ನು ನಾವು ಹಿಮ್ಮುಕಿಹಾಕಿ ಈಗ ಸಹಕಾರಿ ಕ್ಷೇತ್ರದಲ್ಲಿ ಒಂದು ಸಕ್ಕರೆ ಕಾರ್ಖಾನೆ ಮಾಡಬೇಕೆಂದು ಪ್ರಯತ್ನ ಮಾಡಿದ್ದೇವೆ.

ಶ್ರೀ ಕೊಣಂದೂರು ಲಿಂಗಪ್ಪ.—ಈಗಿರತಕ್ಕಂಥ ಸಹಕಾರಿ ಸಕ್ಕರೆ ಕಾರ್ಖಾನೆ ಏನಿದೆ, ಆ ಸಕ್ಕರೆ ಕಾರ್ಖಾನೆಗೆ ತತ್‌ಕ್ಷಣ ಲೈಸೆನ್ಸ್ ಸಿಕ್ಕದೇ ಇರುವ ಹಾಗೆ ಅಡಚಣೆಯನ್ನು ಉಂಟುಮಾಡುವುದಕ್ಕಾಗಿ ಬಂಡವಾಳ ಶಾಹಿಗಳ ಕೈಗೊಂಬೆಯಾಗಿರತಕ್ಕಂಥ ಶ್ರೀಮತಿ ಇಂದಿರಾಗಾಂಧಿಯವರ ಹತ್ತಿರ ಓಡಾಡುವುದು ತಮ್ಮ ಗಮನಕ್ಕೆ ಬಂದಿದೆಯೇ ಸ್ವಾಮಿ?

ಶ್ರೀ ಎಸ್. ಎಂ. ಕೃಷ್ಣ.—ಅವರು ಇಲ್ಲಿ ಸಹಕಾರಿ ಸಕ್ಕರೆ ಕಾರ್ಖಾನೆ ಆಗಬಾರದು ಎಂದು ಹೇಳಿ ಡೆಲ್ಲಿಗೆ ಹೋಗಿ ಅವರು ಪ್ರಯತ್ನ ಮಾಡುತ್ತಿದ್ದಾರೆ ಎಂದು ಅಪಾದನೆ ಬಂದಿದೆ, ಆ ಅಪಾದನೆಯಂತೆ ಅವರು ಒಂದೂ ಪಕ್ಷ ಪ್ರಯತ್ನ ಮಾಡಿದರೂ ಕೂಡ, ಅವರು ಬೆಂಗಳೂರಿನಲ್ಲಿಯೇ ಆಗಲಿ, ಡೆಲ್ಲಿಯಲ್ಲಿಯೇ ಆಗಲಿ ಅವರ ಪ್ರಯತ್ನ ಏನೂ ಫಲಕಾರಿ ಯಾಗುವುದಿಲ್ಲವೆಂದು ಹೇಳುತ್ತೇನೆ.

ಶ್ರೀ ಎಂ. ಮಲ್ಲಪ್ಪ.—ಸ್ವಾಮಿ ಈ ಭದ್ರಾ ಮತ್ತು ತುಂಗಾ ಆಯಂಕಟ್ಟಿನ ಬಳಿ ಇರತಕ್ಕಂಥ ಪ್ರದೇಶಗಳಲ್ಲಿ ಎಷ್ಟು ಸಕ್ಕರೆ ಕಾರ್ಖಾನೆಗಳಿವೆ? ಎಷ್ಟನ್ನು ಮಾಡಬೇಕೆಂದಿದ್ದೀರಿ? ಅದಕ್ಕೆ ಎಷ್ಟು ಶೇರ್ ಬಂಡವಾಳ ಬೇಕಾಗುತ್ತದೆಂಬುದನ್ನು ತಿಳಿಸುತ್ತೀರಾ?

ಶ್ರೀ ಎಸ್. ಎಂ. ಕೃಷ್ಣ.—ಅದಕ್ಕೆ ನೋಟೀಸ್ ಬೇಕು.

ಶ್ರೀ ಎಸ್. ಜಿ. ಹಾಲಪ್ಪ.—ಬಹುಶಃ ನಮ್ಮ ಮಾನ್ಯ ಮಂತ್ರಿಗಳು ಈ ಸಕ್ಕರೆ ಕಾರ್ಖಾನೆಗೆ ೩೦ ಲಕ್ಷ ರೂಪಾಯಿ ಬೇಕು ಎಂದು ಹೇಳಿದರು, ೩೦ ಲಕ್ಷ ರೂಪಾಯಿ ಸಂಗ್ರಹ ಆದ ಕೂಡಲೇ ಕೇಂದ್ರ ಸರ್ಕಾರದವರಿಗೆ ಈ ವಿಷಯವನ್ನು ತಿಳಿಸಿ ಅದಷ್ಟು ಬೇಗ ಲೈಸನ್ಸ್ ಸಿಗುವ ಹಾಗೆ ಮಾಡುತ್ತಿರಾ?

ಶ್ರೀ ಎಸ್. ಎಂ. ಕೃಷ್ಣ.—ಮಾನ್ಯ ಹಾಲಪ್ಪನವರು ಮತ್ತು ಇತರ ಸ್ನೇಹಿತರು ೩೦ ಲಕ್ಷ ರೂಪಾಯಿಗಳನ್ನು ಸಂಗ್ರಹ ಮಾಡಿದ ಕೂಡಲೇ ಲೈಸನ್ಸ್‌ನ್ನು ಕೊಡಿಸುವ ಗ್ಯಾರಂಟಿಯನ್ನು ನಾನು ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್. ಎಂ. ಶೀರ್ಷಾಳಿ ಚಂದ್ರಶೇಖರ್.—ಸ್ವಾಮಿ ತಾವು ಕೇಂದ್ರ ಸರ್ಕಾರಕ್ಕೆ ಈ ವಿಷಯದ ಬಗ್ಗೆ ಶಿಫಾರಸ್ಸು ಮಾಡಿ ಕಳುಹಿಸಿದ್ದೇವೆ, ಶೀಘ್ರದಲ್ಲಿಯೇ ಈ ಕೆಲಸವನ್ನು ಪ್ರಾರಂಭಿಸುವ ಯೋಜನೆಯನ್ನು ಮಾಡುತ್ತೇವೆಂದು ಹೇಳಿದ್ದಾರಿ. ಇದಕ್ಕೆ ಏನಾದರೂ ಕಾಲಮಿತಿ ಇದೆಯೇ? ಯಾವತ್ತು ಲೈಸನ್ಸ್ ಕೊಡುತ್ತಾರೆ, ಯಾವಾಗ ಪ್ರಯತ್ನ ಮಾಡಬೇಕು?

ಶ್ರೀ ಎಸ್. ಎಂ. ಕೃಷ್ಣ.—ಲೈಸನ್ಸ್‌ನ್ನು ಕೊಡಲು ಗೌವರ್ನಮೆಂಟ್ ಆಫ್ ಇಂಡಿಯಾದವರು ಒಂದು ಪ್ರೊಸೀಜರನ್ನು ಹಾಕಿಕೊಂಡಿದ್ದಾರೆ ಆ ಪ್ರಕಾರ ಲೈಸನ್ಸ್‌ನ್ನು ಕೊಡುತ್ತಾರೆ.

Enquiries against Public Works Department Officers in Dharwar District

575. SMT. SUMATI B. MADIMAN (Dharwar Rural)—

Will the Minister for Public Works be pleased to state:—